## ಮಾರಾಟ ತೆರಿಗೆಯ ಬದಲಾಗಿ ಬಡ್ಡಿರಹಿತ ಸಾಲ

೬೫೫. ಶ್ರೀ ಕೆ. ಹೆಚ್ ಪಾಟೀಲ್ (ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

(ಅ) ಉದ್ದಿಮೆದಾರರು ಹಾಪತಿ ಮಾಡಿರುವ ಮೊದಲನೇ ೫ ವರ್ಷಗಳಲ್ಲಿ ಮಾರಾಟ ತೆರಿಗೆಯ ಬದಲಾಗಿ ಬಡ್ಡಿರಹಿತ ಸಾಲವನ್ನು ಕೊಡುವಂತೆ ಸರ್ಕಾರ ಯಾವುದಾದರೂ ಯೋಜನೆಯನ್ನು ಘೋಷಿಸಿದೆಯೇ ? ಹಾಗಿದ್ದಲ್ಲಿ ಎಷ್ಟು ಕೈಗಾರಿಕೆಗಳು ಅರ್ಜಿಯನ್ನು ಸಲ್ಲಿಸಿದ್ದಾರೆ ಮತ್ತು ಎಷ್ಟು ಹಣ ಕೊಡಲಾಗಿದೆ ?

(ಆ) ಕೈಗಾರಿಕೆಗಳಿಗೆ ಅಭಿವೃದ್ಧಿ ಸಾಲವನ್ನು (ಬಡ್ಡಿರಹಿತ) ರೂ. ೫೦ ಲಕ್ಷಕ್ಕಿಂತ ಹೆಚ್ಚು ಕೊಟ್ಟಿದ್ದು ನಿಜವೇ ಮತ್ತು ಒಟ್ಟು ಎಷ್ಟು ಕೈಗಾರಿಕೆಗಳು ಕೇಳಿಕೊಂಡಿರುವರು ಮತ್ತು ಇನ್ನೂ ಎಷ್ಟು ಕೈಗಾರಿಕೆಗಳಿಗೆ ಕೊಡಬೇಕಾಗಿದೆ.

(ಇ) ದೊಡ್ಡ ಶ್ರೀಮಂತ ಉದ್ದಿಮೆದಾರರಿಗೆ ಕೋಟಿಗಟ್ಟಲೆ ರೂ.ಗಳನ್ನು ಬಡ್ಡಿರಹಿತ ಸಾಲವಾಗಿ ನಿಗದಿಮಾಡಿದ ಹೆಚ್ಚುವರಿ ಉಲ್ಲಂಘನೆ ಕೊಡುತ್ತಿರುವುದು ನಿಜವೇ ? ಹಾಗಿದ್ದಲ್ಲಿ ಅಂತಹ ಜನರ ಹೆಸರು ಮತ್ತು ಕೊಟ್ಟಿರುವ ಸಾಲವೆಷ್ಟು ?

(ಈ) ವಿದ್ಯುತ್ ತೆರಿಗೆ ಪರಿಹಾರ ಸಾಲವನ್ನಾಗಿ ಕೈಗಾರಿಕೆಗಳಿಗೆ ಕೊಡುವ ಯೋಜನೆಯನ್ನು ಸರ್ಕಾರ ಘೋಷಿಸಿದ್ದು ನಿಜವೇ ? ಹಾಗಿದ್ದಲ್ಲಿ ಎಷ್ಟು ಕೈಗಾರಿಕೆಗಳ ಅರ್ಜಿಗಳು ಸರ್ಕಾರದ ಮುಂದಿವೆ ?

(ಉ) ಅರ್ಜಿಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಹಣದ ಕೊರತೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) ಹೌದು. ೪೨ ಘಟಕಗಳು, ಪಾವತಿ ಮಾಡಿರುವ ಹಣ ರೂಪಾಯಿ ೫.೬೫,೫೫,೪೮೯-೦೦

(ಆ) ಹೌದು. ಮಂಜೂರು ಮಾಡಿದ ೬ ಘಟಕಗಳ ಪೈಕಿ ಒಂದರೆ ಘಟಕಕ್ಕೆ ಪೂರ್ತಿ ಹಣ ಬಿಡುಗಡೆ ಮಾಡಿದೆ.

(ಇ) ಸರ್ಕಾರ ಈ ಕೆಳಗಿನಂತೆ ಸಾಲವನ್ನು ಮಂಜೂರು ಮಾಡಿದೆ

೧. ಮೆಸರ್ಸ್ ಆಟೋಮ್ಯಾಟಿವ್ ಆಕ್ಸಲ್ ಲಿಮಿಟೆಡ್, ಹೂಟಗಲ್ಲಿ ಇಂಡಸ್ಟ್ರಿಯಲ್ ಏರಿಯಾ, ಮೈಸೂರು (ಅಭಿವೃದ್ಧಿ ಸಾಲ) ರೂ. ೪.೯೦ ಕೋಟಿ

೨. ಮೆಸರ್ಸ್ ಮೆಷನರಿ ಮ್ಯಾನುಫ್ಯಾಕ್ಚರ್ಸ್ ಕಾರ್ಪೋರೇಷನ್, ಬೆಲವಾಡಿ ಇಂಡಸ್ಟ್ರಿಯಲ್ ಏರಿಯಾ, ಮೈಸೂರು (ಅಭಿವೃದ್ಧಿ ಸಾಲ) ರೂ. ೨.೬೬ ಕೋಟಿ

೩. ಮೆಸರ್ಸ್ ಗೊಗ್ಟೆ ಟೆಕ್ಸ್‌ಟೈಲ್ಸ್ ಲಿಮಿಟೆಡ್, ಕಕ್ಕೆ ಇಂಡಸ್ಟ್ರಿಯಲ್ ಏರಿಯಾ. ಬೆಳಗಾಂ (ಅಭಿವೃದ್ಧಿ ಸಾಲ) ರೂ. ೧.೪೭ಕೋಟಿ

೪. ಮೆಸರ್ಸ್ ಕರ್ನಾಟಕ ಬಾಲ್ ಬೇರಿಂಗ್ಸ್ ಕಾರ್ಪೋರೇಷನ್ ಲಿಮಿಟೆಡ್, ಬೆಲವಾಡಿ ಇಂಡಸ್ಟ್ರಿಯಲ್ ಏರಿಯಾ, ಮೈಸೂರು (ಅಭಿವೃದ್ಧಿ ಸಾಲ) ರೂ. ೧.೨೫ ಕೋಟಿ

೫. ಮೆಸರ್ಸ್ ಶ್ರೀ ಚಾಮುಂಡಿ ಪೊಪೆಡ್ಸ್ ಲಿಮಿಟೆಡ್, ಹಿರೇಹಳ್ಳಿ ಇಂಡಸ್ಟ್ರಿಯಲ್ ಏರಿಯಾ ತುಮಕೂರು (ಅಭಿವೃದ್ಧಿ ಸಾಲ) ರೂ. ೧.೨೫ ಕೋಟಿ

೬. ಮೆಸರ್ಸ್ ವಿಕ್ರಾಂತ್ ಟೈರ್ಸ್ ಲಿಮಿಟೆಡ್, ಮೈಸೂರು (ದುಡಿಮೆ ಬಂಡವಾಳದ ಸಾಲ) ರೂ. ೪.೩೨ ಕೋಟಿ

(ಈ) ಇಲ್ಲ

(ಉ) ಹೌದು. ೧೯೮೪-೮೫ನೇ ಸಾಲಿನಲ್ಲಿ ಒಟ್ಟು ರೂ. ೧೪೭ ಲಕ್ಷ ೪೬ ಘಟಕಗಳಿಗೆ ಬಿಡುಗಡೆ ಮಾಡಲಾಗಿದೆ. ೧೯೮೫-೮೬ನೇ ಸಾಲಿನಲ್ಲಿ ಬೇಕಾಗಿರುವ ಹಣವನ್ನು ಕೊಡುವಂತೆ ಪ್ರಯತ್ನ ಮಾಡಲಾಗುವುದು.